Akashvani : Bangalore
National Bulletin In Kannada
16.06.2024 / 13.10 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
16.06.2024 / 13.10 hrs

<><*<><>*><>

<u>ಮುಖ್ಯಾಂಶಗಳು</u>

೧. ಸಂಸತ್ ಭವನದ ಸಂಕೀರ್ಣದಲ್ಲಿ ನೂತನವಾಗಿ ನಿರ್ಮಿಸಲಾದ 'ಪ್ರೇರಣಾ ಸ್ಥಳ'- ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರಿಂದ ಇಂದು ಉದ್ಘಾಟನೆ

೨. ಲಡಾಖ್‌ನಲ್ಲಿ ಹೆಮಿಸ್ ಮೊನಾಸ್ಟಿಕ್ ಹಬ್ಬ ಶ್ರದ್ಧಾ ಭಕ್ತಿಯಿಂದ ಆಚರಣೆ

೩. ಜಮ್ಮು -ಕಾಶ್ಮೀರದ ಭದ್ರತಾ ಪರಿಸ್ಥಿತಿ ಹಾಗೂ ಅಮರ್‌ನಾಥ್ ಯಾತ್ರೆ ಸಿದ್ಧತೆ ಬಗ್ಗೆ ಉನ್ನತ ಮಟ್ಟದ ಸಭೆ ನಡೆಸಿದ ಅಮಿತ್ ಶಾ

೪. ಮಹಿಳಾ ಏಕದಿನ ಕ್ರಿಕೆಟ್ ಸರಣಿ; ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ಭಾರತ- ದಕ್ಷಿಣ ಆಫ್ರಿಕಾ ತಂಡ ಮುಖಾಮುಖಿ

<><*<><>*><>

ಸಂಸತ್ ಭವನದ ಸಂಕೀರ್ಣದಲ್ಲಿ ನೂತನವಾಗಿ ನಿರ್ಮಿಸಲಾದ 'ಪ್ರೇರಣಾ ಸ್ಥಳ'ವನ್ನು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಇಂದು ಉದ್ಘಾಟಿಸಲಿದ್ದಾರೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆಯ ಉಪಾಧ್ಯಕ್ಷ ಹರಿವಂಶ್ ನಾರಾಯಣ್ ಸಿಂಗ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ರಾಜ್ಯಸಭೆ ಮತ್ತು ಲೋಕಸಭೆಯ ಎಲ್ಲ ಸದಸ್ಯರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಸಂಸತ್ ಭವನದ ಸಂಕೀರ್ಣದ ಒಳಗೆ ಒಂದೇ ಸ್ಥಳದಲ್ಲಿ ಮಹಾನ್ ನಾಯಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಪ್ರತಿಮೆಗಳನ್ನು ನೋಡಲು ಮತ್ತು ಗೌರವ ಸಲ್ಲಿಸಲು ಸಾಧ್ಯವಾಗುವಂತೆ ಗಣ್ಯರು ಮತ್ತು ಇತರ ಸಂದರ್ಶಕರ ಅನುಕೂಲಕ್ಕಾಗಿ ಈ 'ಪ್ರೇರಣಾ ಸ್ಥಳ'ವನ್ನು ನಿರ್ಮಿಸಲಾಗಿದೆ. ಮಹಾನ್ ವ್ಯಕ್ತಿಗಳ ಜೀವನಗಾಥೆ ಮತ್ತು ಸಂದೇಶಗಳನ್ನು ಹೊಸ ತಂತ್ರಜ್ಞಾನದ ಮೂಲಕ ಸಂದರ್ಶಕರಿಗೆ ಲಭ್ಯವಾಗುವಂತೆ ಮಾಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ.

<><*<><>*><>

ಲಡಾಖ್‌ನಲ್ಲಿ ಅತ್ಯಂತ ಜನಪ್ರಿಯವಾದ ವಾರ್ಷಿಕ ಹೆಮಿಸ್ ಮೊನಾಸ್ಟಿಕ್ ಹಬ್ಬವನ್ನು ಇಂದಿನಿಂದ ಶ್ರದ್ಧ-ಭಕ್ತಿಯೊಂದಿಗೆ ಉತ್ಸಾಹ ಮತ್ತು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಹಬ್ಬವನ್ನು ಪ್ರಾರ್ಥನೆ, ಪವಿತ್ರ ಮುಖವಾಡ ನೃತ್ಯಗಳ ಪ್ರದರ್ಶನ ಹಾಗೂ ಗುರು ಪದ್ಮ ಸಂಭವ ಅವರ ಜನ್ಮ ವಾರ್ಷಿಕೋತ್ಸವದ ಸಂದರ್ಭವನ್ನು ಗುರುತಿಸಲು ಥಂಕಾ ಅಥವಾ ಮ್ಯೂರಲ್ ಪೇಂಟಿಂಗ್ ಪ್ರದರ್ಶನದೊಂದಿಗೆ ಆಚರಿಸಲಾಗುತ್ತದೆ. ಸನ್ಯಾಸಿಗಳ ಮುಖವಾಡ ನೃತ್ಯಗಳ ಮೂಲಕ ಗುರು ಪದ್ಮ ಸಂಭವದ ಪ್ರಬಲ ಮತ್ತು ಪವಿತ್ರ ಅಭಿವ್ಯಕ್ತಿಯನ್ನು ವೀಕ್ಷಿಸಲು ದೇಶದ ವಿವಿಧ ಭಾಗಗಳಿಂದ ಹಾಗೂ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಜನರು ಲಡಾಕ್‌ಗೆ ಭೇಟಿ ನೀಡುವುದರಿಂದ ಇದು ದೇಶದಲ್ಲಿ ಜನಪ್ರಿಯ ಹಬ್ಬವಾಗಿದೆ.

<><*<><>*><>

ಕೊಲ್ಕತ್ತಾದಲ್ಲಿ ಅಪರಾಧ ನ್ಯಾಯ ವ್ಯವಸ್ಥೆ ನಿರ್ವಹಣೆಯಲ್ಲಿ ಭಾರತೀಯ ಪ್ರಗತಿ ಪಥ ಎಂಬ ಸಮ್ಮೇಳನವನ್ನು ಸರ್ಕಾರ  ಇಂದು ಆಯೋಜಿಸಿದೆ.  ೩ ನೂತನ ಅಪರಾಧ ಕಾನೂನುಗಳಾದ ಭಾರತೀಯ ನ್ಯಾಯ ಸಂಹಿತೆ ೨೦೨೩, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ೨೦೨೩ ರ ಪ್ರಮುಖ ಲಕ್ಷಣಗಳ ಕುರಿತು ಪ್ರಶ್ನೋತ್ತರ ಮತ್ತು ಚರ್ಚೆ ಮೂಲಕ ಬೆಳಕು ಚೆಲ್ಲುವುದು ಈ ಸಮ್ಮೇಳನದ ಉದ್ದೇಶವಾಗಿದೆ. ಕಳೆದ ವರ್ಷದ ಡಿಸೆಂಬರ್ ನಲ್ಲಿ ರಾಷ್ಟ್ರಪತಿಗಳು ಈ ಮೂರು ಕಾನೂನುಗಳಿಗೆ ಅನುಮೋದನೆ ನೀಡಿದ್ದು, ಜುಲೈ ೧ರಿಂದ ಜಾರಿಗೆ ಬರಲಿದೆ. ಕಳೆದ ೨ ತಿಂಗಳುಗಳಲ್ಲಿ ಕಾನೂನು ವ್ಯವಹಾರಗಳ ಸಚಿವಾಲಯ ನವದೆಹಲಿ ಮತ್ತು ಗುವಾಹಾತಿಯಲ್ಲಿ ೨ ಪ್ರಮುಖ ಸಮ್ಮೇಳನಗಳನ್ನು ಆಯೋಜಿಸಿತ್ತು. ಈ ಮೂಲಕ ನೂತನ ಕಾನೂನುಗಳ ಬಗ್ಗೆ ವಿಶೇಷವಾಗಿ ಮಧ್ಯಸ್ಥಗಾರರು, ಕಾನೂನು ಜಾರಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲಾಯಿತು.

<><*<><>*><>

ಜಮ್ಮು ಮತ್ತು ಕಾಶ್ಮೀರದಲ್ಲಿ, ಪೊಲೀಸರು ಸೇನೆಯ ಸಹಯೋಗದೊಂದಿಗೆ ಕುಪ್ವಾರಾ ಜಿಲ್ಲೆ ಕರ್ನಾಹ್‌ನಲ್ಲಿ ನಾರ್ಕೋ-ಭಯೋತ್ಪಾದನಾ ಜಾಲವನ್ನು ಭೇದಿಸಿದ್ದಾರೆ. ಈ ಸಂಬಂಧ ಮೂರು ಜನರನ್ನು ಬಂಧಿಸುವ ಮೂಲಕ ಗಣನೀಯ ಪ್ರಮಾಣದ ಹೆರಾಯಿನ್, ಸ್ಫೋಟಕಗಳು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಚ್ಚಿನ ತನಿಖೆ ವೇಳೆ ಸದ್ಪುರ ನಿವಾಸಿ ಪರ್ವೇಜ್

ಅಹ್ಮದ್ ಪಠಾಣ್ ಎಂಬಾತನನ್ನು ಬಂಧಿಸಲಾಗಿದ್ದು, ಆತನ ಬಳಿ ೩ ಪಿಸ್ತೂಲ್, ೭೬ ಪಿಸ್ತೂಲ್ ಸುತ್ತುಗಳು, ೬ ಪಿಸ್ತೂಲ್ ಮ್ಯಾಗಜೀನ್ ಮತ್ತು ಅಂದಾಜು ೫ ಕೆಜಿ ಶಂಕಿತ ಸ್ಫೋಟಕಗಳು ಪತ್ತೆಯಾಗಿವೆ. ಕುಪ್ವಾರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಬಂಧಿತರಿಂದ ಸರಿಸುಮಾರು ೫೦೦ ಗ್ರಾಂ ಹೆರಾಯಿನ್ ಅನ್ನು ವಶಪಡಿಸಿಕೊಳ್ಳಲಾಗಿದೆ. ನಾರ್ಕೋ-ಭಯೋತ್ಪಾದನಾ ಜಾಲವನ್ನು ಬಯಲಿಗೆಳೆಯಲು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

<><*<><>*><>

ಜೂನ್ ೨೧ ರಂದು ಅಂತಾರಾಷ್ಟ್ರೀಯ ಯೋಗ ದಿನದ ೧೦ ನೇ ಆವೃತ್ತಿಯ ಪೂರ್ವಭಾವಿಯಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಪಾದಹಸ್ತಾಸನ ಅಥವಾ ಕೈಯಿಂದ ಪಾದದ ಭಂಗಿಯ ವೀಡಿಯೊ ಕ್ಲಿಪ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಈ ವೀಡಿಯೋವನ್ನು ಹಂಚಿಕೊಂಡ ಪ್ರಧಾನಿ, ಜನರು ಯೋಗದ ಹಲವಾರು ಪ್ರಯೋಜನಗಳಿಗಾಗಿ ಈ ಭಂಗಿಯನ್ನು ಅಭ್ಯಾಸ ಮಾಡುವಂತೆ ಪ್ರೇರೇಪಿಸಿದರು. ವೀಡಿಯೋ ತುಣುಕಿನಲ್ಲಿ ಆರೋಗ್ಯ ಪ್ರಯೋಜನಗಳನ್ನು ವಿವರಿಸುವ ಮಾಹಿತಿ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಲಭ್ಯವಿದೆ.

<><*<><>*><>

ಕೇಂದ್ರ ಗೃಹ ಸಚಿವ ಅಮಿತ್ ಶಾ, ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿ ಪರಿಶೀಲನೆ ಹಾಗೂ ಅಮರ್‌ನಾಥ್ ಯಾತ್ರೆ ಸಿದ್ಧತೆ ಬಗ್ಗೆ ಇಂದು ಉನ್ನತ ಮಟ್ಟದ ಸಭೆ ನಡೆಸಿದರು. ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಕೇಂದ್ರ ಗೃಹ ಕಾರ್ಯದರ್ಶಿ, ಸೇನೆ, ಪೊಲೀಸ್ ಹಾಗೂ ಜಮ್ಮು-ಕಾಶ್ಮೀರದ ಹಿರಿಯ ಆಡಳಿತಗಾರರು ಸಭೆಯಲ್ಲಿ ಪಾಲ್ಗೊಂಡಿದ್ದರು.

<><*<><>*><>

ಸಿಕ್ಕಿಂನಲ್ಲಿ, ಭಾರೀ ಮಳೆ ಮತ್ತು ಭೂಕುಸಿತದಿಂದ ಉಂಟಾದ ರಸ್ತೆ ತಡೆಯಿಂದಾಗಿ ಮಂಗನ್ ಜಿಲ್ಲೆ ಲಾಚುಂಗ್‌ನಲ್ಲಿ ಸಿಲುಕಿರುವ ಸುಮಾರು ೧ ಸಾವಿರದ ೨೦೦ ಪ್ರವಾಸಿಗರನ್ನು ಸ್ಥಳಾಂತರಿಸುವ ಪ್ರಯತ್ನಗಳು ನಡೆಯುತ್ತಿವೆ. ಸಚಿವ ತೆರಿಂಗ್ ಥೆಂಡುಪ್ ಭುಟಿಯಾ ಅವರು, ಹವಾಮಾನ ಪರಿಸ್ಥಿತಿಗಳಿಗೆ ಅನುಗುಣವಾಗಿ ಏರ್‌ಲಿಫ್ಟ್ ಮತ್ತು ರಸ್ತೆಮಾರ್ಗಗಳನ್ನು ಬಳಸಿಕೊಂಡು ಸ್ಥಳಾಂತರಿಸುವಿಕೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್

ಅವರು ಪ್ರವಾಹ ಪೀಡಿತ ಮೆಲ್ಲಿ ಬಜಾರ್‌ಗೆ ಭೇಟಿ ನೀಡಿ ಸ್ಥಳೀಯ ಜನತೆಗೆ ಮಾನ್ಸೂನ್ ನಂತರ ಶಾಶ್ವತ ಪ್ರವಾಹ ಗೋಡೆಗಳನ್ನು ನಿರ್ಮಿಸುವ ಭರವಸೆ ನೀಡಿದರು.

<><*<><>*><>

ಲಡಾಖ್‌ನಲ್ಲಿ, ಕಾರ್ಗಿಲ್ ವಿಜಯ್ ದಿವಸ್‌ನ ೨೫ನೇ ವಾರ್ಷಿಕೋತ್ಸವದ ಗೌರವಾರ್ಥವಾಗಿ, ಭಾರತೀಯ ಸೇನೆ ಕಾರ್ಗಿಲ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ಮಿನಿ ಮ್ಯಾರಥಾನ್ -'ರನ್ ಫಾರ್ ಫನ್' ಅನ್ನು ಆಯೋಜಿಸಿತ್ತು. ಬೆಳಗ್ಗೆ ೬ ರಿಂದ ೧೧ ಗಂಟೆಯವರೆಗೆ ನಡೆದ ಕಾರ್ಯಕ್ರಮದಲ್ಲಿ ೧೫ ರಿಂದ ೧೮ ವರ್ಷ ವಯೋಮಾನದ ೩೧೬ ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಾಲಕರ ಮತ್ತು ಬಾಲಕಿಯರ ವಿಭಾಗ ಉತ್ಸಾಹದಿಂದ ಭಾಗವಹಿಸಿದ್ದರು.

<><*<><>*><>

ಆಕಾಶವಾಣಿಯಲ್ಲಿ ಬಿತ್ತರಗೊಳ್ಳುವ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಇದೇ ತಿಂಗಳ ೩೦ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಮ್ಮ ಮನದ ಮಾತನ್ನು ದೇಶ, ವಿದೇಶಗಳ ಜನತೆಯೊಂದಿಗೆ ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೧೧ ನೇ ಆವೃತ್ತಿಯಾಗಿದ್ದು, ಸತತ ಮೂರನೇ ಅವಧಿಗೆ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಆಯ್ಕೆಯಾದ ನಂತರ ಪ್ರಸಾರವಾಗಲಿರುವ ಮೊದಲ ಸಂಚಿಕೆಯಾಗಿದೆ. ಮನ್ ಕಿ ಬಾತ್ ಕಾರ್ಯಕ್ರಮಕ್ಕಾಗಿ ಜನತೆ ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು ಟೋಲ್ ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಸಲ್ಲಿಸಬಹುದು. ನರೇಂದ್ರ ಮೋದಿ ಆಪ್ ಅಥವಾ ಒಧಿಉಂv ಓಪನ್ ಫೋರಮ್ ಮೂಲಕ ಜನರು ತಮ್ಮ ವಿಚಾರಗಳನ್ನು ಆನ್‌ಲೈನ್‌ನಲ್ಲೂ ಹಂಚಿಕೊಳ್ಳಬಹುದಾಗಿದೆ. ಸಲಹೆಗಳನ್ನು ಈ ತಿಂಗಳ ೨೮ ರವರೆಗೆ ಸ್ವೀಕರಿಸಲಾಗುತ್ತದೆ. 'ಮನ್ ಕಿ ಬಾತ್' ಕಾರ್ಯಕ್ರಮವನ್ನು ಆಕಾಶವಾಣಿ ಮತ್ತು ದೂರದರ್ಶನ, ಆಕಾಶವಾಣಿ ನ್ಯೂಸ್ ಜಾಲತಾಣ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಆಪ್ ಮೂಲಕ ಆಲಿಸಬಹುದಾಗಿದೆ. ಈ ಕಾರ್ಯಕ್ರಮ ಎಐಆರ್ ನ್ಯೂಸ್, ಡಿಡಿ ನ್ಯೂಸ್, ಪಿಎಂಒ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲೂ ಲೈವ್ ಸ್ಟ್ರೀಮ್‌ಗಳಲ್ಲಿ ಲಭ್ಯವಿರಲಿದೆ. ಮನ್ ಕಿ ಬಾತ್ ಕಾರ್ಯಕ್ರಮದ ಹಿಂದಿ ಭಾಷಣದ ನಂತರ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮ ಪ್ರಸಾರವಾಗಲಿದೆ.

<><*<><>*><>

ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ೧೮ ನೇ ಆವೃತ್ತಿಯ ಸಾಕ್ಷ್ಯಚಿತ್ರ, ಕಿರು ಕಾದಂಬರಿ ಮತ್ತು ಅನಿಮೇಷನ್ ಚಲನಚಿತ್ರಗಳನ್ನು ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಅವರು ನಿನ್ನೆ ಉದ್ಘಾಟಿಸಿದರು. ಇನ್ನೂ ಐದು ದಿನಗಳ ಕಾಲ ಈ ಚಿತ್ರೋತ್ಸವ ನಡೆಯಲಿದೆ. "೧೮ನೇ ಮುಂಬೈ ಅಂತರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ, ಖ್ಯಾತ ವನ್ಯಜೀವಿ ಚಿತ್ರನಿರ್ಮಾಪಕ ಸುಬ್ಬಯ್ಯ ನಲ್ಲಮುತ್ತು ಅವರಿಗೆ ಈ ವರ್ಷದ ಅಸ್ಕರ್ ವಿ.ಶಾಂತಾರಾಮ್, ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿತ್ರೋತ್ಸವದಲ್ಲಿ ಶ್ರೀಲಂಕಾದ ಪ್ರವಾಸವನ್ನು ಚಿತ್ರಿಸುವ ಸಾಂಸ್ಕೃತಿಕ ಪ್ರದರ್ಶನವೂ ಕೂಡ ಸೇರಿದೆ. ಈ ವರ್ಷದ ೭೭ ನೇ ಕ್ಯಾನೆಸ್‌ನ ಚಲನಚಿತ್ರೋತ್ಸವದಲ್ಲಿ ಲಾ ಸಿನೆಫ್ ಪ್ರಶಸ್ತಿ ಗೆದ್ದ ಎಫ್‌ಟಿಐಐ ವಿದ್ಯಾರ್ಥಿಯ ಸನ್ ಫ್ಲವರ್ಸ್ ವರ್ ದ ಫಸ್ಟ್ ವನ್ಸ್ ಟು ನೊ ಕಿರುಚಿತ್ರವು ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶನಗೊಂಡಿತು. ಚಾರ್ಲಿ ಹ್ಯಾಮಿಲ್ಟನ್ ಜೇಮ್ಸ್ ನಿರ್ದೇಶನದ “ಬಿಲ್ಲಿ ಮತ್ತು ಮೊಲ್ಲಿ, ಆನ್ ಆಟರ್ ಲವ್ ಸ್ಟೋರಿ” ಸಹ ಉದ್ಘಾಟನಾ ಸಮಾರಂಭದಲ್ಲಿ ಪ್ರದರ್ಶನಗೊಂಡಿತು.

<><*<><>*><>

ಅಂತರಾಷ್ಟ್ರೀಯ ಯೋಗ ದಿನವನ್ನು ಜೂನ್ ೨೧ ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಯುನೈಟೆಡ್ ಕಿಂಗ್‌ಡಂನಲ್ಲಿರುವ ಭಾರತದ ಹೈ ಕಮಿಷನ್ ಲಂಡನ್‌ನ ಟ್ರಾಫಲ್ಗರ್ ಸ್ಕ್ವೇರ್‌ನಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ೭೦೦ ಕ್ಕೂ ಹೆಚ್ಚು ಉತ್ಸಾಹಿ ಜನರ ಭಾಗವಹಿಸಿದ್ದರು. ೨೦೧೫ ರಿಂದ ವಿಶ್ವಸಂಸ್ಥೆಯು ಇದನ್ನು ಅಳವಡಿಸಿಕೊಂಡ ನಂತರ ವಾರ್ಷಿಕವಾಗಿ ಜೂನ್ ೨೧ ರಂದು ವಿಶ್ವದಾದ್ಯಂತ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತದೆ.

<><*<><>*><>

ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿನ ಅದ್ವಿತೀಯ ಸೇವೆಗಾಗಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಭಾರತೀಯ ರೈಲ್ವೇ ತನ್ನ ಹೆಸರನ್ನು ದಾಖಲಿಸಿದೆ. ರೈಲ್ವೆ ಸಚಿವಾಲಯ ಕಳೆದ ಫೆಬ್ರವರಿ ೨೬ ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ೪೦ ಲಕ್ಷ ೧೯ ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

<><*<><>*><>

ಇಸ್ರೇಲ್ ರಕ್ಷಣಾ ಪಡೆ ದಕ್ಷಿಣ ಗಾಜಾ ಪಟ್ಟಿಯ ನಗರವಾದ ರಫಾದಲ್ಲಿ ನಡೆದ ಸ್ಫೋಟದಲ್ಲಿ ತನ್ನ ಎಂಟು ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದೆ. ವಾಯುವ್ಯ ಜಿಲ್ಲೆ ರಫಾದಲ್ಲಿ ಹಮಾಸ್ ವಿರುದ್ಧ ಕಾರ್ಯಾಚರಣೆಯನ್ನು ನಡೆಸಿದ ನಂತರ ಬೆಂಗಾವಲು ಪಡೆ ವಿಶ್ರಾಂತಿಗಾಗಿ ಸೇನೆಯಿಂದ ವಶಪಡಿಸಿಕೊಂಡ ಕಟ್ಟಡಗಳತ್ತ ಸಾಗುತ್ತಿದ್ದ ಸಮಯದಲ್ಲಿ ನೇಮರ್- ಸಿಇವಿ ಮೇಲೆ ಪ್ರಬಲ ಸ್ಫೋಟ ಸಂಭವಿಸಿದ ಎಂದು ಇಸ್ರೇಲ್ ರಕ್ಷಣಾ ಪಡೆ ತಿಳಿಸಿದೆ.

<><*<><>*><>

ಬೆಂಗಳೂರಿನ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಇಂದು ಮಧ್ಯಾಹ್ನ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಮಹಿಳಾ ತಂಡ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಪಂದ್ಯ ಮಧ್ಯಾಹ್ನ ೧.೩೦ ಕ್ಕೆ ಆರಂಭವಾಗಲಿದೆ. ೨೦೨೫ರಲ್ಲಿ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್‌ಗಾಗಿ ಎರಡೂ ತಂಡಗಳು ತಮ್ಮ ತಯಾರಿಯಲ್ಲಿ ನಿರ್ಣಾಯಕ ಹೆಜ್ಜೆಯಾಗಿ ಈ ಸರಣಿಯನ್ನು ಪ್ರಾರಂಭಿಸುತ್ತಿವೆ. ಮೂರು ಏಕದಿನ ಪಂದ್ಯಗಳ ಜೊತೆಗೆ, ದಕ್ಷಿಣ ಆಫ್ರಿಕಾದ ಮಹಿಳಾ ತಂಡ, ಭಾರತದೊಂದಿಗೆ ಒಂದು ಟೆಸ್ಟ್ ಪಂದ್ಯ ಮತ್ತು ಮೂರು ಟಿ-೨೦ ಅಂತರಾಷ್ಟ್ರೀಯ ಪಂದ್ಯಗಳನ್ನು ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಆಡಲಿವೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>=

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೨.೩೦ ಕ್ಕೆ <>*><>